ಪೊಲೀಸ್ ಅಧೀಕ್ಷಕರವರ ಕಛೇರಿ. ಬೆಂಗಳೂರು ಗ್ರಾಮಾಂತರ ಜಿಲ್ಲೆ.

**ಪತ್ರಿಕಾ ಪ್ರಕಟಣೆ**

**ನೆಲಮಂಗಲ ಉಪವಿಭಾಗ ನೆಲಮಂಗಲ ಗ್ರಾಮಾಂತರ ವೃತ್ತ.**

ನೆಲಮಂಗಲ ಗ್ರಾಮಾಂತ ಪೊಲೀಸ್ ಠಾಣೆ

**ಸಾರ್ವಜನಿಕರ ಗಮನವನ್ನು ಬೇರೆ ಕಡೆ ಸೆಳೆದು ಹಣವನ್ನು ಕಳ್ಳತನ ಮಾಡುತ್ತಿದ್ದ ನಾಲ್ಕು ಜನ ಆರೋಪಿಗಳ ಬಂಧನ, ಮತ್ತು 15,20,000/- ರೂ ನಗದು ಹಣ ಹಾಗೂ 3 ಬೈಕ್‌ಗಳ ವಶ**

**ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ಉಪವಿಭಾಗ, ನೆಲಮಂಗಲ ಗ್ರಾಮಾಂತರ ವೃತ್ತ, ನೆಲಮಂಗಲ ಗ್ರಾಮಾಂತರ. ನೆಲಮಂಗಲ ಟೌನ್. ಆನೇಕಲ್, ಅತ್ತಿಬೆಲೆ, ಹೆಬ್ಬಗೋಡಿ, ದೊಡ್ಡಬಳ್ಳಾಪುರ ಟೌನ್, ರಾಮನಗರ ಜಿಲ್ಲೆಯ ಐಜೂರು, ಕಗ್ಗಲಿಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಾರ್ವಜನಿಕರ ಗಮನವನ್ನು ಬೇರೆ ಕಡೆ ಸೆಳೆದು ನಗದು ಹಣವನ್ನು ಕಳ್ಳತನ ಮಾಡಿದ್ದ 1) ಸ್ಯಾಮ್ ವೆಲ್ ರಾಜ್ ಬಿನ್ ತಿಮೊತಿ, 2) ಗಿರಿ ಕುಮಾರ್ ಬಿನ್ ಲೇಟ್ ಬಾಬು, 3) ಗುಡ್ಡಟ್ಟಿ ಬಾಬು @ ಬಾಬು ಬಿನ್ ಲೇಟ್ ರಾಘವುಲು 4) ಪಿ. ಕುಮಾರ್ ಬಿನ್ ಲೇಟ್ ವೀರಯ್ಯ ಎಂಬ ನಾಲ್ಕು ಜನ ಆರೋಪಿಗಳನ್ನು ದಸ್ತಗಿರಿ ಮಾಡಿ ಇವರಿಂದ 15,20,000/- ರೂ ನಗದು ಹಣ ಮತ್ತು 3 ಬೈಕ್ ಗಳನ್ನು ವಶಪಡಿಸಿಕೊಳ್ಳುವಲ್ಲಿ ನೆಲಮಂಗಲ ಗ್ರಾಮಾಂತರ ಪೋಲಿಸರು ಯಶಸ್ವಿಯಾಗಿರುತ್ತಾರೆ.**

ಬೆಂಗಳೂರು ಜಿಲ್ಲೆ, ಮತ್ತು ನೆಲಮಂಗಲ ಉಪ ವಿಭಾಗದ ವ್ಯಾಪ್ತಿಗೆ ಸೇರಿದ ಪೊಲೀಸ್ ಠಾಣಾ ಸರಹದ್ದುಗಳಲ್ಲಿ ಇತ್ತೀಚೆಗೆ ಬ್ಯಾಂಕುಗಳಿಂದ ಹಣವನ್ನು ಡ್ರಾ ಮಾಡಿಕೊಂಡು ಬರುವ ಸಾರ್ವಜನಿಕರ ಗಮನವನ್ನು ಬೇರೆಡೆ ಸೆಳೆದು ಅವರ ಬಳಿಯಿದ್ದ ಹಣವನ್ನು ಕಳ್ಳತನ ಮಾಡುವ ಪ್ರಕರಣಗಳು ಹೆಚ್ಚಾಗಿ ವರದಿಯಾಗುತ್ತಿದ್ದರಿಂದ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪೊಲೀಸ್ ಅಧೀಕ್ಷಕರವರಾದ ಶ್ರೀ, ಡಾ. ಕೋನ ವಂಶಿ ಕೃಷ್ಣ. ಐ.ಪಿ.ಎಸ್, ಅಪರ ಪೊಲೀಸ್ ಅಧೀಕ್ಷಕರಾದ ಶ್ರೀ. ಲಕ್ಷ್ಮೀಗಣೇಶ್ ಕೆ.ಎಸ್.ಪಿ.ಎಸ್ ಮತ್ತು ನೆಲಮಂಗಲ ಉಪ ವಿಭಾಗದ ಪೊಲೀಸ್ ಉಪಾಧೀಕ್ಷಕರಾದ ಶ್ರೀ, ಹೆಚ್.ಎಸ್ ಜಗದೀಶ್ ಕೆ.ಎಸ್.ಪಿ.ಎಸ್, ರವರ ಮಾರ್ಗದರ್ಶನದಲ್ಲಿ ಆರೋಪಿಗಳ ಪತ್ತೆಗಾಗಿ ನೆಲಮಂಗಲ ಗ್ರಾಮಾಂತರ ವೃತ್ತದ ಸರ್ಕಲ್ ಇನ್ಸ್‌ಪೆಕ್ಟರ್ ರವರಾದ ಶ್ರೀ ಎಂ. ಆರ್. ಹರೀಶ್ ರವರ ವಿಶೇಷ ತಂಡವನ್ನು ರಚನೆ ಮಾಡಿದ್ದು ಅದರಂತೆ ದಿನಾಂಕ 17.08.2021 ರಂದು ವಿಶೇಷ ತಂಡದ ಸದಸ್ಯರಾದ ನೆಲಮಂಗಲ ಗ್ರಾಮಾಂತರ ಪೊಲೀಸ್ ಠಾಣೆಯ ಪಿ.ಎಸ್.ಐ ಶ್ರೀ. ವಸಂತ್. ಹೆಚ್ ಟಿ ಮತ್ತು ಅವರ ಠಾಣೆಯ ಸಿಬ್ಬಂದಿಗಳು ನೆಲಮಂಗಲ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದು ಟಿ. ಬೇಗೂರು ಗ್ರಾಮದ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕ್ ಬಳಿ ನಿಂತುಕೊಂಡು ಬ್ಯಾಂಕ್ ನಿಂದ ಹಣವನ್ನು ಡ್ರಾ ಮಾಡಿಕೊಂಡು ಹೋಗುವವರನ್ನು ನಿಗಾವಣೆ ಮಾಡಿ ಅವರ ಗಮನವನ್ನು ಬೇರೆಡೆ ಸೆಳೆದು ಹಣವನ್ನು ಕಳ್ಳತನ ಮಾಡಲು ಹೊಂಚುಹಾಕುತ್ತಿದ್ದ 1) ಸ್ಯಾಮ್ ವೆಲ್ ರಾಜ್ ಬಿನ್ ತಿಮೊತಿ, 2) ಗಿರಿ ಕುಮಾರ್ ಬಿನ್ ಲೇಟ್ ಬಾಬು, 3) ಗುಡ್ಡಟ್ಟಿ ಬಾಬು @ ಬಾಬು ಬಿನ್ ಲೇಟ್ ರಾಘವುಲು 4) ಪಿ. ಕುಮಾರ್ ಬಿನ್ ಲೇಟ್ ವೀರಯ್ಯ ಎಂಬ 4 ಜನ ಆಸಾಮಿಗಳನ್ನು ದಸ್ತಗಿರಿ ಮಾಡಿ ಆಸಾಮಿಗಳ ವಿರುದ್ಧ ನೆಲಮಂಗಲ ಗ್ರಾಮಾಂತರ ಪೊಲೀಸ್ ಠಾಣಾ ಮೊ.ಸಂ. 187/2021 ಕಲಂ 41 ಕ್ಲಾಸ್ (ಡಿ). 102 ಸಿಆರ್‌ಪಿಸಿ ಜೊತೆಗೆ 379 ಐಪಿಸಿ ರೀತ್ಯ ಸ್ವತಃ ಪ್ರಕರಣ ದಾಖಲಿಸಿರುತ್ತಾರೆ.

ಸದರಿ ಪ್ರಕರಣದಲ್ಲಿ ಆರೋಪಿಗಳನ್ನು ಹೆಚ್ಚಿನ ವಿಚಾರಣೆ ಮಾಡಲಾಗಿ ಆರೋಪಿಗಳಿಂದ ಈ ಕೆಳಕಂಡ ಪ್ರಕರಣಗಳು ಪತ್ತೆಯಾಗಿರುತ್ತವೆ.

| ಕ್ರಸಂ | ಪೊಲೀಸ್ ಠಾಣೆ | ಮೊ. ನಂ ಮತ್ತು ಕಲಂ |
|---|---|---|
| 1. | ನೆಲಮಂಗಲ ಟೌನ್ | ಮೊ. ನಂ 66/2020 ಕಲಂ 379 ಐಪಿಸಿ. |
| 2. | ದೊಡ್ಡಬಳ್ಳಾಪುರ ಟೌನ್ | ಮೊ.ಸಂ. 117/2020 ಕಲಂ 379 ಐಪಿಸಿ. |
| 3. | ದೊಡ್ಡಬಳ್ಳಾಪುರ ಟೌನ್ | ಮೊ.ಸಂ. 109/2021 ಕಲಂ 379 ಐಪಿಸಿ, |
| 4. | ಆನೇಕಲ್ | ಮೊ.ಸಂ. 18/2021 ಕಲಂ 420 ಐಪಿಸಿ. |
| 5. | ಆನೇಕಲ್ | ಮೊ.ಸಂ. 120/2021 ಕಲಂ 379 ಐಪಿಸಿ. |
| 6. | ಹೆಬ್ಬಗೋಡಿ | ಮೊ.ಸಂ. 98/2021 ಕಲಂ 379 ಐಪಿಸಿ. |
| 7. | ಜಿಗಣಿ | ಮೊ.ಸಂ. 141/2021 ಕಲಂ 379 ಐಪಿಸಿ. |
| 8. | ಅತ್ತಿಬೆಲೆ | ಮೊ.ಸಂ. 211/2021 ಕಲಂ 379 ಐಪಿಸಿ. |
| 9. | ಕಗ್ಗಲಿಪುರ | ಮೊ.ಸಂ. 169/2021 ಕಲಂ 420. 379 ಐಪಿಸಿ. |
| 10. | ಐಜೂರು | ಮೊ,ಸಂ. 42/2021 ಕಲಂ 379 ಐಪಿಸಿ. |
| 11. | ಬಂಗಾರಪೇಟೆ | ಮೊ.ಸಂ. 224/2021 ಕಲಂ 379 ಐಪಿಸಿ (ಕೆಎ-08-ಎಸ್-8021 ನಂಬರ್ ಹೊಂಡಾ ಆಕ್ಟೀವಾ ಸ್ಕೂಟರ್) |

ಮೇಲ್ಕಂಡ ಪ್ರಕರಣಗಳು ಪತ್ತೆಯಾಗಿದ್ದು, ಆರೋಪಿಗಳಿಂದ ಒಟ್ಟು 10 ಪ್ರಕರಣಗಳಲ್ಲಿ ಒಟ್ಟು 15,20,000/- ರೂ ನಗದು ಹಣ, ಕೆಎ-08 ಎಸ್-8021 ನಂಬರ್ ಹೊಂಡಾ ಆಕ್ಟೀವಾ ಮತ್ತು ಬೆಂಗಳೂರು ಸಿಟಿ, ಕೂಡ್ಲು ಗೇಟ್ ಬಳಿ ಆರೋಪಿಗಳು ಕಳ್ಳತನ ಮಾಡಿಕೊಂಡು ಬಂದಿದ್ದ ಕೆಎ-04 ಜೆಎಫ್-1624 ಹೊಂಡಾ ಆಕ್ಟೀವಾ ಸ್ಕೂಟರ್ ಗಳು ಪತ್ತೆಯಾಗಿದ್ದು, ಜೊತೆಗೆ ಆರೋಪಿಗಳು ಕೃತ್ಯಕ್ಕೆ ಉಪಯೋಗಿಸಿದ್ದ ಎಪಿ-39 ಜೆಎ-0883 ನಂಬರ್ ಹೊಂಡಾ ಯುನಿಕಾರ್ನ್ ಮೋಟಾರ್ ಸೈಕಲ್‌ನ್ನು ವಶಪಡಿಸಿಕೊಂಡಿರುತ್ತಾರೆ.

**ದಸ್ತಗಿರಿ ಮಾಡಿರುವ ಆರೋಪಿಗಳ ಹೆಸರು ಮತ್ತು ವಿಳಾಸ**

1) ಸ್ಯಾಮ್ ವೆಲ್ ರಾಜ್ ಬಿನ್ ತಿಮೊತಿ, 26 ವರ್ಷ. ಗೊಗುಲೋಲ್ ಜನಾಂಗ, (ಕನ್ವರ್ಟೆಡ್ ಕ್ರಿಶ್ಚಿಯನ್), ಮ್ಯಾಕಾನಿಕ್ ಕೆಲಸ, ಹಾಲಿ ವಾಸ: ಒರಂತಗಂಲ್ ಗೊಲ್ಲ ಕುಪ್ಪಂ (ಒ.ಜಿ. ಕುಪ್ಪಂ) ವಿಲೇಜ್, ಕಾವೇಟಿಪುರಂ ಪೋಸ್ಟ್ ನಗರಿ ಮಂಡಲಂ, ಚಿತ್ತೂರು ಜಿಲ್ಲೆ. ಆಂಧ್ರಪ್ರದೇಶ ರಾಜ್ಯ. ಸ್ವಂತ ಊರು: ನಂ 6/10, ಜಾಪ್ರಿ ಐಯರ್ ಚರ್ಚ್ ಹತ್ತಿರ. 1ನೇ ಸ್ಟೀಟ್, ಅಂಬತ್ತೂರು ಕಲೆಕ್ಟ್ರಿನಗರ್, ತಿರುವಳ್ಳೂರ್ ಜಿಲ್ಲೆ, ತಮಿಳುನಾಡು ರಾಜ್ಯ.

2) ಗಿರಿ ಕುಮಾರ್ ಬಿನ್ ಲೇಟ್ ಬಾಬು, 39 ವರ್ಷ. ದಾಸರ ಜನಾಂಗ, ಆಟೋ ಡ್ರೈವರ್ ಕೆಲಸ, ದಾಸರಿ ಜನಾಂಗ, ಒರಂತಂಗಲ್ ಗೊಲ್ಲ ಕುಪ್ಪಂ (ಒ.ಜಿ.ಕುಪ್ಪಂ) ವಿಲೇಜ್. ಕಾವೇಟಿಪುರಂ ಪೋಸ್ಟ್. ನಗರಿ ಮಂಡಲಂ, ಚಿತ್ತೂರು ಜಿಲ್ಲೆ, ಆಂಧ್ರಪ್ರದೇಶ ರಾಜ್ಯ.

3) ಗುಡ್ಡಟ್ಟಿ ಬಾಬು @ ಬಾಬು ಬಿನ್ ಲೇಟ್ ರಾಘವುಲು, 40 ವರ್ಷ. ಆಟೋ ಡ್ರೈವರ್, ದಾಸರಿ ಜನಾಂಗ, ಒರಂತಂಗಲ್ ಗೊಲ್ಲ ಕುಪ್ಪಂ (ಒ.ಜಿ.ಕುಪ್ಪಂ) ವಿಲೇಜ್. ಕಾವೇಟಿಪುರಂ ಪೋಸ್ಟ್. ನಗರಿ ಮಂಡಲಂ, ಚಿತ್ತೂರು ಜಿಲ್ಲೆ, ಆಂಧ್ರಪ್ರದೇಶ ರಾಜ್ಯ.721

4) ಕುಮಾರ್.ಪಿ ಬಿನ್ ಲೇಟ್ ವೀರಯ್ಯ, 50 ವರ್ಷ, ದಾಸರಿ ಜನಾಂಗ ಕೂಲಿ ಕೆಲಸ, ವಾಸ ಒರಂತಂಗಲ್ ಗೊಲ್ಲ ಕುಪ್ಪಂ (ಒ.ಜಿ.ಕುಪ್ಪಂ) ವಿಲೇಜ್. ಕಾವೇಟಿಪುರಂ ಪೋಸ್ಟ್. ನಗರಿ ಮಂಡಲಂ, ಚಿತ್ತೂರ ಜಿಲ್ಲೆ, ಆಂಧ್ರಪ್ರದೇಶ ರಾಜ್ಯ.

ಆರೋಪಿಗಳ ಪತ್ತೆಗೆ ನೆಲಮಂಗಲ ಗ್ರಾಮಾಂತರ ವೃತ್ತದ ಸರ್ಕಲ್ ಇನ್ಸ್ ಪೆಕ್ಟರ್ ಆದ ಶ್ರೀ. ಎಂ.ಆರ್. ಹರೀಶ್. ನೆಲಮಂಗಲ ಗ್ರಾಮಾಂತರ ಪೊಲೀಸ್ ಠಾಣೆಯ ಪಿ.ಎಸ್.ಐ. ಶ್ರೀ. ವಸಂತ್. ಹೆಚ್. ಟಿ. ಸಿಬ್ಬಂದಿಗಳಾದ ಹೆಚ್.ಸಿ. 323. ಬಾಲಾಜಿಸಿಂಗ್. ಪಿ.ಸಿ. 956. ಫೈರೋಜ್, ಪಿ.ಸಿ. 957. ನರೇಶ್. ಪಿ.ಸಿ. 967. ಶಿವಶಂಕರ್. ಪಿ.ಸಿ. 1370. ಮೋಹನ್ ಕುಮಾರ್. ಪಿ.ಸಿ. 1372. ದಿನೇಶ. ಪಿ.ಸಿ. 862. ಮಧುಕುಮಾರ್. ಪಿ.ಸಿ.964. ಹನುಮಂತರಾಜು. ಪಿ.ಸಿ. 1546. ಅವಿನಾಶ್. ಪಿ.ಸಿ. 1637. ಚನ್ನಬಸಪ್ಪ. ಐ. ಎನ್. ಮ.ಪಿ.ಸಿ. 02. ನಳಿನ. ಎ.ಆರ್.ಎಸ್.ಐ. ಹರೀಶ್ ಮತ್ತು ಎ.ಹೆಚ್.ಸಿ.16 ಮಲ್ಲಿಕಾರ್ಜುನ ಭಮಸಾಗರ ರವರು ಭಾಗಿಯಾಗಿರುತ್ತಾರೆ. ಈ ಕಾರ್ಯಾಚರಣೆಯನ್ನು ಮಾನ್ಯ ಹಿರಿಯ ಪೊಲೀಸ್ ಅಧಿಕಾರಿಗಳು ಶ್ಲಾಘಿಸಿರುತ್ತಾರೆ.

**(ಡಾ. ಕೋನ ವಂಶಿ ಕೃಷ್ಣ. ಐಪಿಎಸ್)**
**ಪೊಲೀಸ್ ಅಧೀಕ್ಷಕರು**
**ಬೆಂಗಳೂರು ಗ್ರಾಮಾಂತರ ಜಿಲ್ಲೆ**